

ಅನ್ಯೋನ್ಯವಾಗಿದ್ದಾರೆ ಎಂದು ಅಪ್ಪನಿಗೆ ಬಹಳ ಸಿಟ್ಟು. ಸಿಟ್ಟು ಸೆಡವು ಬಿಗಡಾಯಿಸಿ ಬೀದಿ ಕಾಳಗವಾಗಿ, ಕೊನೆಗೆ ಸಮಾಲೋಚನೆಯ ಹಂತಕ್ಕೆ ಬಂದಾಗ ಅಪ್ಪ ಮಹಾಶಯ ಮನಸ್ಸು ಬಿಚ್ಚಿಟ್ಟ. ‘ಅವಳು ಯಾವಾಗಲೂ ನನ್ನ ವಿರುದ್ಧ ಮಗನ ಕಿವಿ ಊದುತ್ತಾಳೆ. ನಾನು ಬೇಗ ಸತ್ತು ಹೋದರೆ ನನ್ನ ಕೆಲಸ ಮಗನಿಗೆ ಸಿಗಲಿ ಅನ್ನೋದೇ ಅವಳ ಪಿತೂರಿ...’ ಹೀಗೆ ಇನ್ನೂ ಏನೇನೋ ಆರೋಪ; ಇದರಲ್ಲಿ ಹುರುಳಿದೆಯೋ, ಇಲ್ಲವೋ. ಅಪ್ಪ ಅಮ್ಮಂದಿರ ಇಂತಹ ಮನಸ್ಥಿತಿಯ ನಡುವೆ ಬೆಳೆಯುತ್ತಿರುವ ಮಗನ ಮನಸ್ಥಿತಿಯನ್ನು ಯಾರು ಬೇಕಾದರೂ ಊಹಿಸಿಕೊಳ್ಳಬಹುದು.

ಧಾರವಾಡದ ಹಳ್ಳಿಯೊಂದರ ಶಾಲೆಯಲ್ಲಿ ಮತ್ತೊಂದು ಘಟನೆ ನಡೆಯಿತು. ಶಾಲೆಗೆ ಬಂದ ಅಪ್ಪ ತನ್ನ ಮಗಳ ಬಗ್ಗೆ ಬಹಳ ಅಕ್ಕರೆಯಿಂದ ಮಾತನಾಡಿದ. ಅವಳನ್ನು ಇನ್ನಷ್ಟು ಒಳ್ಳೆಯ ಶಾಲೆಗೆ ಸೇರಿಸಬೇಕು ಎಂಬ ಕಾರಣ ಕೊಟ್ಟು ಟಿ.ಸಿ. ಮತ್ತು ಅಂಕಪಟ್ಟಿಗಳನ್ನು ಪಡೆದುಕೊಂಡ. ಮೂಲಪ್ರತಿಗಳು ಕೈಗೆ ಸಿಗುತ್ತಲೇ, ಅವುಗಳನ್ನು ಪರಪರನೇ ಹರಿದು ಹಾಕಿಬಿಟ್ಟ. ಗಾಬರಿ ಬಿದ್ದ ಶಿಕ್ಷಕರು ಆತನನ್ನು ದಬಾಯಿಸಿದರು. ಬಳಿಕ ಮೇಷ್ಟರು ಆತನೊಂದಿಗೆ ಮಾತನಾಡಿದಾಗ ಹೊರಬಿದ್ದ ಸಂಗತಿ ಗಾಬರಿ ಹುಟ್ಟಿಸುವಂತಿತ್ತು.

‘ಅಮ್ಮ ಮಗಳು ಸೇರಿ ಭಾರೀ ಕಿತಾಪತಿ ಮಾಡ್ತಾರೆ ಸರ್. ಮಗಳು ಚೆನ್ನಾಗಿ ಓದ್ತಾಳೆ ಅನ್ನೋದೇ ದೊಡ್ಡ ವಿಚಾರ. ಅಪ್ಪನಾದ ನನಗೆ ಮನೆಯಲ್ಲಿ ಬೆಲೆಯೇ ಇಲ್ಲ. ಎಲ್ಲ ಹರಿದು ಹಾಕಿದ್ದೇನೆ. ಓದಲಿ ನೋಡೋಣ ಈಗ... ಅಮ್ಮ ಮಗಳ ಕೊಬ್ಬು ಇಳೀತದೆ ಈಗ...’ ಅಂತೇನೇನೋ ಹಲುಬಿದ.

ಕಲೀಂ ಉಲ್ಲಾ ಅವರು ಉದಾಹರಿಸಿದ ಇಂಥ ಅಪ್ಪ–ಅಮ್ಮಂದಿರು ಸೂಕ್ಷ್ಮವಾಗಿ ಗಮನಿಸಿದರೆ ನಮ್ಮ ನಡುವೆಯೂ ಕಾಣಿಸುತ್ತಾರೆ.

## ದೂರುವಿಕೆ ಉಲ್ಟಾ ಆಗಬಹುದು

ಅಪ್ಪನನ್ನೋ ಅಮ್ಮನನ್ನೋ ದೂರುವ ಪ್ರಕ್ರಿಯೆ ಎಷ್ಟು ದಿನ ನಡೆಯಬಹುದು? ಮಗು ತನ್ನದೇ ಆದ ವಿಚಾರವನ್ನು ರೂಢಿಸಿಕೊಳ್ಳುವವರೆಗೆ. ‘ಸ್ವತಂತ್ರ ವ್ಯಕ್ತಿತ್ವ ರೂಪಿಸಿಕೊಂಡ ಬಳಿಕ ಮಕ್ಕಳೂ ಯೋಚನೆ ಮಾಡುತ್ತಾರೆ. ಹೆಚ್ಚಿನ ಸಂದರ್ಭಗಳಲ್ಲಿ ಸದಾ ಅಪ್ಪನನ್ನು ದೂರುವ ಅಮ್ಮನ ವಿರುದ್ಧವೇ, ಅಥವಾ ಅಮ್ಮನನ್ನು ದೂರುವ ಅಪ್ಪನ ವಿರುದ್ಧವೇ ಮಕ್ಕಳು ಸಿಡಿದೇಳುವ ಸಂಭವ ಇದೆ ಎಂದು ಎಚ್ಚರಿಸುತ್ತಾರೆ’ ಬೆಂಗಳೂರಿನ ‘ಬೌರಿಂಗ್ ಅಂಡ್ ಲೇಡಿ ಕರ್ಜನ್ ಮೆಡಿಕಲ್ ಕಾಲೇಜ್ ಅಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್’ನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿರುವ ಡಾ. ಸಿ. ಗುರುಪ್ರಸಾದ್.

ವಿಚ್ಛೇದನಗಳಾದಾಗ ಅಪ್ಪ ಅಥವಾ ಅಮ್ಮ ಒಂಟಿತನದಿಂದ ಬಹಳ ಬೇಸರದಿಂದ ಇರುವುದು ಸಹಜ. ಸಿಟ್ಟು ಸೆಡವು, ಹತಾಶೆಯ ಮನಸ್ಥಿತಿ ಸಹಜವಾಗಿ ಬಂದುಬಿಡುತ್ತದೆ. ಆದರೆ ಅವುಗಳನ್ನು ಪ್ರಕಟಪಡಿಸುವ ರೀತಿಯಲ್ಲಿ ಸಾಧ್ಯವಾದಷ್ಟು ಹಿಡಿತ ಸಾಧಿಸಬೇಕು. ಇದು ವಿಚ್ಛೇದನ ಪಡೆಯುವ ಸಂದರ್ಭದಲ್ಲಿ ಬೇಡವೆಂದರೂ ಬರುವ ಜವಾಬ್ದಾರಿಯೂ ಹೌದು.

‘ವಿಚ್ಛೇದನ ಪಡೆಯದೇ ಇದ್ದಾಗ, ಮನೆಯಲ್ಲಿ ನಡೆಯುವ ಜಗಳಗಳನ್ನು ನಿಭಾಯಿಸಲು ನಮ್ಮ ಪೂರ್ವಜರು ಹಲವು ದಾರಿಗಳನ್ನು ಕಂಡುಕೊಂಡಿದ್ದರು. ಊರಿನ ಗುಡಿಯ ಮುಂದಿರುವ ಬಸವನ ಕಿವಿಯಲ್ಲಿ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವುದು, ಮನೆಯಲ್ಲಿ ಜಗಳ ಬಗೆಹರಿಯಲಿ ಎಂದು ಎಲ್ಲರೂ ಒಟ್ಟಾಗಿ ದೇವಸ್ಥಾನಕ್ಕೋ ಚರ್ಚ್‌ಗೋ ಹೋಗುವುದು... ಹೀಗೆ. ಆದರೆ ಇಂದು ಸಮಾಜ ಸುಶಿಕ್ಷಿತವಾಗುತ್ತಿದೆ. ಆದ್ದರಿಂದ ಸ್ನೇಹಿತರೊಡನೆ ಚರ್ಚೆ, ಸಾಧ್ಯವಾದಷ್ಟು ಸಮಾಜಮುಖಿಯಾದ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು... ಮುಂತಾದ ದಾರಿಗಳನ್ನು ಕಂಡುಕೊಳ್ಳುವುದು ಉತ್ತಮ’ ಎನ್ನುತ್ತಾರೆ ಡಾ. ಗುರುಪ್ರಸಾದ್.

‘ಮಗು ಹುಟ್ಟಿದ ಕ್ಷಣದಿಂದ ದಂಪತಿ ಜೈವಿಕವಾಗಿ ಅಪ್ಪ ಅಮ್ಮನಾಗಿಬಿಡುತ್ತಾರೆ. ಆದರೆ ಮಾನಸಿಕತೆಯನ್ನು ಬೆಳೆಸಿಕೊಳ್ಳುವ ಪ್ರಕ್ರಿಯೆ ಮಾತ್ರ ನಿಧಾನವಾಗಿ ವಿಕಾಸವಾಗುತ್ತದೆ. ಆದ್ದರಿಂದ ಮಕ್ಕಳನ್ನು ಬೆಳೆಸುವ ಬಗ್ಗೆ ಸಮಾಲೋಚನೆಗಳು, ಮುಕ್ತ ಚರ್ಚೆಗಳೇ ಹೆಚ್ಚು ನೆರವಾಗುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ನನ್ನ ಮಗು ಉತ್ತಮ ವಾತಾವರಣದಲ್ಲಿ, ಉತ್ತಮ ವ್ಯಕ್ತಿಯಾಗಿ ಬೆಳೆಯಬೇಕು ಎಂಬ ಮೂಲ ಆಶಯವನ್ನು ಅಪ್ಪ ಅಮ್ಮ ರೂಢಿಸಿಕೊಳ್ಳಬೇಕು. ಈ ಆಶಯವಿದ್ದಾಗ ವಿಚ್ಛೇದನ ಪ್ರಕ್ರಿಯೆಗಳೂ ಕಡಿಮೆಯಾಗಬಹುದೇನೋ’ ಎಂಬುದು ಡಾ. ಗುರುಪ್ರಸಾದ್ ಅವರ ಅಭಿಪ್ರಾಯ.

ಪ್ರತಿಕ್ರಿಯಿಸಿ: **feedback@sudha.co.in**